ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **27.04.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು**:** ಆರೋಪಿಪರಃ ಶ್ರೀ ಹೆಚ್**.**ವಿ**.**ಪಿ**.** ವಕೀಲರ ಮೂಲಕ ಃ

13. ನಿಪಿ 1 ರಲ್ಲಿ ಇರುವ ಇಂಕಿನ ವ್ಯತ್ಯಾಸ ಮತ್ತು ಹೆಚ್ಚುವರಿಯಾಗಿ ಸೊನ್ನೆಗಳನ್ನು ಸೇರ್ಪಡೆ ಮಾಡಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದರೂ ಸಹ ಅದನ್ನು ಒಪ್ಪಿಕೊಂಡರೆ ತೊಂದರೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ಲಕ್ಷ ರೂಪಾಯಿಯನ್ನು ವಾಪಸ್ ಕೊಡುವಂತೆ ಕೇಳಲು ಆರೋಪಿಯು ಲಭ್ಯವಾಗದ ಕಾರಣ ಕೇಳಲು ಸಾಧ್ಯವಾಗಿರುವುದಿಲ್ಲ. ಸದರಿ ಸಂಗತಿಯನ್ನು ನನ್ನ ನೋಟೀಸ್‌ನಲ್ಲಿ ಮತ್ತು ದೂರಿನಲ್ಲಿ ಬರೆಸಿರುವ ಬಗ್ಗೆ ಹೇಳಲು ಆಗುವುದಿಲ್ಲ. ದೂರನ್ನು ತಯಾರು ಮಾಡಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಕೈ ಸಾಲ ತೀರಿಸಲು ಆರೋಪಿಗೆ ಹಣ ಕೊಟ್ಟಿರುತ್ತೇನೆ ಎಂದು ನನ್ನ ನೋಟೀಸ್ ನಲ್ಲಿ ಮತ್ತು ದೂರಿನಲ್ಲಿ ಬರೆಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ನೋಟೀಸ್ ಮತ್ತು ದೂರನ್ನು ತಯಾರು ಮಾಡಲು ನಾನು ಮಾಹಿತಿ ನೀಡದ ಕಾರಣ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ.

14. ನಾನು ಸರ್ಕಾರಿ ನೌಕರ ಎಂದರೆ ಸರಿ. ಆದಾಯ ತೆರಿಗೆಯ ದಾಖಲೆಯಲ್ಲಿ ಆದಾಯ ಮತ್ತು ವೆಚ್ಚದ ಬಗ್ಗೆ ನಮೂದು ಮಾಡಿಸುತ್ತೇನೆ ಎಂದರೆ ಸರಿ. ಪ್ರತಿ ವರ್ಷ ಸರ್ಕಾರಕ್ಕೆ ಆದಾಯ ಮತ್ತು ವೆಚ್ಚವನ್ನು ಘೋಷಣೆ ಮಾಡಿಕೊಳ್ಳಬೇಕು ಎಂದರೆ ಸರಿ. ಆರೋಪಿಗೆ ಸಾಲ ನೀಡಿರುತ್ತೇನೆ ಎಂಬ ಮೊತ್ತವನ್ನು ಆದಾಯ ತೆರಿಗೆ ದಾಖಲೆಯಲ್ಲಿ ನಮೂದು ಮಾಡಿಸಿರುವುದಿಲ್ಲ. ಆ ರೀತಿ ನಮೂದು ಮಾಡಿಸಲು ನನಗೆ ತೊಂದರೆ ಇರಲಿಲ್ಲ, ಜಮೀನು ಮಾರಿ ಬಂದ ಹಣವನ್ನು ಮನೆಯಲ್ಲಿ ಇಟ್ಟುಕೊಂಡಿದ್ದು, ಅದನ್ನು ಕೊಟ್ಟಿದ್ದ ಕಾರಣ ಆ ರೀತಿ ನಮೂದು ಮಾಡಿಸಿರುವುದಿಲ್ಲ. ನಾನು ಆರೋಪಿಗೆ ಸಾಲ ಕೊಟ್ಟಿದ್ದರೆ ಆದಾಯ ತೆರಿಗೆ ದಾಖಲೆಯಲ್ಲಿ ನಮೂದು ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಕರಾರಿನ ಆಧಾರದ ಮೇಲೆ ಆಸ್ತಿಯನ್ನು ಕೊಟ್ಟಿದ್ದು, ಸದರಿ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ ಮತ್ತು ಆರೋಪಿಗೆ ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 88 ರ ಸ್ವತ್ತು 2 ಎಕರೆ ವಿಸ್ತೀರ್ಣ ಹೊಂದಿದ್ದು, ಅದು ಹಲಸಹಳ್ಳಿ ಗ್ರಾಮದಲ್ಲಿ ಇದ್ದು, ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ. ಸದರಿ ಸ್ವತ್ತು ಲಕ್ಷ್ಮೀ ಎಂಬುವವರ ಹೆಸರಿನಲ್ಲಿ ಇದೆ ಎಂದರೆ

ಸರಿಯವರು ನನ್ನ ಪತ್ನಿಯಾಗಿರುತ್ತಾರೆ. ನನ್ನ ಪತ್ನಿಯ ಹೆಸರಿನಲ್ಲಿ ಇದ್ದ ಸ್ವತ್ತನ್ನು ಮಾರಾಟ ಮಾಡಿ, ಮಾರಾಟ ಮಾಡಿದ ಹಣವನ್ನು ಆರೋಪಿಗೆ ಸಾಲವಾಗಿ ನೀಡಿರುತ್ತೇನೆ ಎಂದು ದೂರಿನಲ್ಲಿ ಹೇಳಿರುತ್ತೇನೆ. ಮೇಲೆ ಹೇಳಿದ ಸರ್ವೆ ನಂ. 88 ರ ಸ್ವತ್ತಿನ ಆಧಾರದ ಮೇಲೆ ಲಕ್ಷ್ಮೀ ರವರು ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ 4,04,000/- ರೂಪಾಯಿಗಳನ್ನು ಸಾಲ ಪಡೆದಿರುತ್ತಾರೆ ಎಂದರೆ, ಸಾಲ ತೀರುವಳಿಯಾಗಿರುತ್ತದೆ. 2019 ರಿಂದ ಇದುವರೆವಿಗೂ ಸದರಿ ಸಾಲವು ಮುಂದುವರೆಯುತ್ತಿದೆ ಎಂದರೆ ತೀರುವಳಿಯಾಗಿರುತ್ತದೆ. ಸದರಿ ಸ್ವತ್ತಿನ ಪಹಣಿಗಳು ಈಗ ನೋಡುತ್ತಿರುವ ದಾಖಲೆಯಾಗಿರುತ್ತದೆ ಎಂದರೆ ಸರಿ. ಸದರಿ 07 ಪಹಣಿಗಳನ್ನು ನಿ.ಡಿ. 1 ರಿಂದ 8 ಎಂದು ಗುರುತಿಸಲಾಯಿತು. ಸಾಲ ತೀರುವಳಿ ಆಗಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಮೇಲೆ ಹೇಳಿದ ಸ್ವತ್ತು ಮಳವಳ್ಳಿಯಿಂದ ದೂರದಲ್ಲಿ ಇರುವುದರಿಂದ ಅಲ್ಲಿಗೆ ಹೋಗಿ ಬರಲು ಕಷ್ಟವಾಗಿದ್ದ ಕಾರಣ ಮಾರಾಟ ಮಾಡಿರುತ್ತೇವೆ.

15. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಮ್ಮ ಕುಟುಂಬದಲ್ಲಿ ಮಾಡಿದ್ದ ಸಾಲವನ್ನು ತೀರಿಸಲು ಮೇಲೆ ಹೇಳಿದ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ದೂರದಲ್ಲಿ ಇರುವುದರಿಂದ ಮಾರಾಟ ಮಾಡುತ್ತಿರುವುದಾಗಿ ಕರಾರು ಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ಕ್ರಯದ ಕರಾರಿನಲ್ಲಿ ಬರೆಸಿರುವುದು ಸತ್ಯವಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ. 9 ಎಂದು ಗುರುತಿಸಲಾಯಿತು. ನನ್ನ ಮೃತ ಮಗ ಮಾಡಿದ್ದ ಸಾಲ ಮತ್ತು ನಮ್ಮ ಕುಟುಂಬದ ಸಾಲವನ್ನು ತೀರಿಸಲು ಸದರಿ ಸ್ವತ್ತನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ.

16. ನನ್ನ ಮತ್ತು ಕನಕರಾಜುರವರ ನಡುವೆ ಸದರಿ ಮಾರಾಟದ ವ್ಯವಹಾರ ನಡೆದಿದೆ ಎಂದರೆ ಸರಿ. ನಿಪಿ 1 ಚೆಕ್‌ನ್ನು ನನಗೆ ಕನಕರಾಜುರವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಕನಕರಾಜುರವರು ನಿಪಿ 1 ಚೆಕ್ ನೀಡಿ ದೂರನ್ನು ನನ್ನ ಮೂಲಕ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಕನಕರಾಜು ಮತ್ತು ಆರೋಪಿಯು ಸ್ನೇಹಿತರು ಎಂದರೆ ಸರಿ. ನಾನು ಮತ್ತು ಕನಕರಾಜುರವರು ಸ್ನೇಹಿತರು ಎಂದರೆ ಸರಿ. ಸಾಲ ನೀಡಿರುತ್ತೇನೆ ಎಂದು ಹೇಳುವ ದಿನದಂದು ನನ್ನ ಬಳಿ 10 ಲಕ್ಷ ರೂಪಾಯಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನಗೆ 10 ಲಕ್ಷ ರೂಪಾಯಿ ಸಾಲ ನೀಡುವ ಸಾಮರ್ಥ್ಯ ಇಲ್ಲದೇ ಇದ್ದರೂ ಸಹ ಕನಕರಾಜುರವರ ಮಾತು ಕೇಳಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಲ ನೀಡಿರುತ್ತೇನೆ ಎಂದು ಹೇಳುವ ಸಮಯದಲ್ಲಿ ನಮ್ಮ ಕುಟುಂಬವೇ ಆರ್ಥಿಕವಾಗಿ ತೊಂದರೆಯಲ್ಲಿದ್ದು, ಆದ್ದರಿಂದ ನಾನು ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮಾಡಿದ್ದ ಸಾಲವನ್ನು ತೀರಿಸುವ ಸಲುವಾಗಿ ನನ್ನ ಪತ್ನಿಯು ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದರು

ಎಂದರೆ ಸರಿಯಲ್ಲ. ಕನಕರಾಜರವರಿಗೆ ಸಹಾಯ ಮಾಡಲು ಅವರ ಮಾತು ಕೇಳಿ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.